Sri S. RAJENDRAN : Can I explain to you, our feelings so that..

MR. SPEAKER : There is no opportunity under our rules. When the Minister for Higher Education is present in the House. We will take up this Questions.

SRI S. RAJENDRAN : To prepare this, I have taken two days.

MR. SPEARKER : I am here to protect your interest.

SRI S. RAJANEDRAN : This is the way, they are ignoring K.G.F.

MR. SPEAKER : No, K.G.F. will not be ignored. Mr. Rajendran will not be ignored. You are on top in my priority.

ಸಕಲೇಶಪುರ ಮತ್ತು ಆಲೂರು ಕ್ಷೇತ್ರದಲ್ಲಿ ಶಾಲೆಗಳು ಮತ್ತು ಜೂನಿಯರ್ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳು.

83 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಆಲೂರು ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಶಾಲೆಗಳು, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ (ಪ್ರತ್ಯೇಕವಾರು ನೀಡುವುದು)

ಆ) ಈ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಒಟ್ಟು ಎಷ್ಟು ಜನ ಅಧ್ಯಾಪಕರುಗಳಿದ್ದಾರೆ? ಎಷ್ಟು ಜನ ಅಧ್ಯಾಪಕರುಗಳು ಇರಬೇಕಿತ್ತು? (ಅಂಕಿ ಅಂಶಗಳನ್ನು ನೀಡುವುದು)

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ)

	ಪ್ರಾಥಮಿಕ ಶಾಲೆ	ಪ್ರೌಢ ಶಾಲೆ	ಪ.ಪೂ.ಕಾ
ಸಕಲೇಶಪುರ	167	07	03
ಆಲೂರು	165	07	02

ಆ)	ಮಂಜೂರು ಆದ ಹುದ್ದೆ	ಕಾರ್ಯ ನಿರ್ವಹಿಸುತ್ತಿರುವ	ಖಾಲಿ ಹುದ್ದೆಗಳು ಶಿಕ್ಷಕರ ಸಂ.
ಸಕಲೇಶಪುರ ತಾ.			
ಪ್ರಾಥಮಿಕ ಶಾಲೆಗಳು	543	457	96
ಪ್ರೌಢಶಾಲೆ	050	030	20
ಪ.ಪೂ. ಕಾಲೇಜುಗಳು	045	035	10
ಆಲೂರು ತಾ.			
ಪ್ರಾಥಮಿಕ ಶಾಲೆಗಳು	448	387	61
ಪ್ರೌಢ ಶಾಲೆಗಳು	48	31	9
ಪದವಿಪೂರ್ವ ಕಾಲೇಜುಗಳು	31	28	3

ಶ್ರೀ ಬಿ. ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ ಸುಮಾರು 126 ಉಪಾಧ್ಯಾಯರ ಕೊರತೆ ಇದೆ. ಗ್ರಾಮಾಂತರ ಪ್ರದೇಶದಲ್ಲಿ ವಿದ್ಯೆಯನ್ನು ಹೆಚ್ಚು ಹೆಚ್ಚು ಕಲ್ಪಿಸಿ ಕೊಡಬೇಕೆಂದು ಸಾಕ್ಷರತಾ ಅಂದೋಲನವನ್ನು ಹಮ್ಮಿಕೊಂಡಿರತಕ್ಕಂಥ ಸಂದರ್ಭದಲ್ಲಿ ಉಪಾಧ್ಯಾಯರು ಇಲ್ಲದಿದ್ದರೆ ಗ್ರಾಮಾಂತರ ಪ್ರದೇಶದ ಮಕ್ಕಳು ಶಾಲೆಗೆ ಹೋಗುವುದು ಬಿಟ್ಟು ಬೇರೆ ಯಾವ ಕೆಲಸಕ್ಕೆ ಹೋಗಬೇಕು. ಮಾನ್ಯ ಗೋವಿಂದೇಗೌಡರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದ್ದರಿಂದ ಈ ಉಪಾಧ್ಯಾಯರುಗಳನ್ನು ಭರ್ತಿ ಮಾಡತಕ್ಕಂಥದ್ದು ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಹೋಗತಕ್ಕಂಥ ಉಪಾಧ್ಯಾಯರುಗಳಿಗೆ ಕನಿಷ್ಟ ಸೌಲಭ್ಯವನ್ನು ಒದಗಿಸಿಕೊಡತಕ್ಕಂಥದ್ದು. ಈ ಉಪಾಧ್ಯಾಯರುಗಳಿಗೂ ಕೊರತೆ ಇದೆ. ಅದು ಏನೆಂದರೆ ಗ್ರಾಮಾಂತರ ಪ್ರದೇಶಗಳಿಗೆ ಅವರು ಹೋದರೆ ಅವರುಗಳಿಗೆ ಕನಿಷ್ಟ ಸೌಲಭ್ಯಗಳು ದೊರಕದೇ ಇರುವುದರಿಂದ ಅನೇಕ ಉಪಾಧ್ಯಾಯರುಗಳು ಗ್ರಾಮಾಂತರ ಪ್ರದೇಶಗಳಿಗೆ ಬರಲು ಇಚ್ಛೆ ಪಡುವುದಿಲ್ಲ. ಆದಕಾರಣ ಅವರಿಗೆ ಕೆಲವು ಕನಿಷ್ಟ ಸೌಲಭ್ಯವನ್ನು ಒದಗಿಸುವ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಉಪಾಧ್ಯಾಯರುಗಳನ್ನು ಆದಷ್ಟು ಶೀಘ್ರವಾಗಿ ಭರ್ತಿ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಮಾನ್ಯ ಮಂತ್ರಿಗಳು ಹಾಕಿಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಬಯಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಸದಸ್ಯರ ಕಳಕಳಿಯ ಹಾಗೆ ನಮ್ಮೆಲ್ಲರಿಗೂ ಇದೆ. ಇವೊತ್ತು ಗ್ರಾಮಾಂತರ ಮಟ್ಟದಲ್ಲಿ ಹೆಚ್ಚು ಉಪಾಧ್ಯಾಯರುಗಳು ಇಲ್ಲ ಎನ್ನುವುದನ್ನು ಅರ್ಥ ಮಾಡಿಕೊಂಡು ಹದಿನೆಂಟು ಸಾವಿರದ ಏಳುನೂರು ಉಪಾಧ್ಯಾಯರುಗಳ

ನೇಮಕ ಮಾಡತಕ್ಕಂಥ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ. ನಾನು ಇದನ್ನು ಮೊದಲೇ ತಿಳಿಸಿದ್ದೇನೆ. ಈಗಾಗಲೇ ಒಂಭತ್ತು ಸಾವಿರದ ಮೂನ್ನೂರು ಐವತ್ತು ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ಮಾನ್ಯ ಶಿವಪ್ಪನವರು ಹಿರಿಯ ಸದಸ್ಯರು ಹಾಗೂ ಹಳ್ಳಿಯಿಂದ ಬಂದಿರತಕ್ಕಂಥವರು. ನಾನೂ ಕೂಡ ಅವರ ಜೊತೆಯಲ್ಲಿ ಕೆಲವು ಪ್ರದೇಶಗಳಿಗೆ ಹೋಗಿ ನೋಡಿದ್ದೇನೆ. ಈಗ ನಾವು 9350 ಉಪಾಧ್ಯಾಯರುಗಳನ್ನು ನೇಮಕ ಮಾಡತಕ್ಕಂಥದ್ದು ಏನು ಇದೆ, ಅವರೆಲ್ಲರನ್ನೂ ನೂರಕ್ಕೆ ನೂರು ಭಾಗ ಹಳ್ಳಿಗಳಲ್ಲೇ ಕೆಲಸ ಮಾಡಬೇಕೆಂದು ಆದೇಶ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಯಾರೇ ಶಾಸಕರಾಗಲೀ, ಮಂತ್ರಿಗಳಾಗಲೀ, ಚುನಾಯಿತ ಪ್ರತಿನಿಧಿಗಳಾಗಲೀ, ದಯವಿಟ್ಟು ಇದರಲ್ಲಿ ಮಧ್ಯ ಪ್ರವೇಶ ಮಾಡಬೇಡಿ ಅವರಿಗೆ ಎಲ್ಲಾ ಹಳ್ಳಿಗಳಿಗೆ ಕಳುಹಿಸುವುದಕ್ಕೆ ತಾವು ಸಹಕಾರ ಕೊಡಬೇಕೆಂದು ಕೇಳಿದ್ದೆ. ನನಗೆ ತುಂಬಾ ಸಂತೋಷವಾಗಿದೆ ಏಕೆಂದರೆ ಯಾರೊಬ್ಬರೂ ಅವರಿಗೆ ಟೌನ್‌ಗೆ ಹಾಕಿ, ಸಿಟಿಗೆ ಹಾಕಿ, ಕಾರ್ಪೊರೇಷನ್‌ಗೆ ಹಾಕಿ ಎಂದು ಮಧ್ಯ ಪ್ರವೇಶ ಮಾಡಲಿಲ್ಲ. ಇದೊಂದು ರೀತಿಯ ಸಂತೋಷ ಹಾಗೂ ನನಗೆ ಕೆಲಸ ಮಾಡಬಹುದೆಂದು ಬಂದಿದೆ. ಈ ಒಂಭತ್ತು ಸಾವಿರದ ಮುನ್ನೂರು ಉಪಾಧ್ಯಾಯರುಗಳು ಏನು ಇದ್ದಾರೆ ಅದರಲ್ಲಿ ಅರ್ಧ ಭಾಗ ಹೆಣ್ಣುಮಕ್ಕಳು ಇದ್ದಾರೆ, ಅರ್ಧ ಭಾಗ ಗಂಡಸರು ಇದ್ದಾರೆ. ಅವರನ್ನೆಲ್ಲಾ ಹಳ್ಳಿಗಳಿಗೆ ವರ್ಗ ಮಾಡಿದ್ದೇವೆ. ಇನ್ನು ಬಾಕಿ ಉಳಿದಿರತಕ್ಕಂಥ ಉಪಾಧ್ಯಾಯರು ಏನು ಇದ್ದಾರೆ ನೇಮಕ ಮಾಡತಕ್ಕಂಥವರು - ಅವರನ್ನು ಹಳ್ಳಿಗಳಿಗೆ ಹಾಕುತ್ತೇವೆ. ಇನ್ನು ನಮ್ಮ ಸ್ನೇಹಿತರು ಹೇಳಿದರು ಹಳ್ಳಿಗಳಿಗೆ ಹೋದಾಗ ಅವರುಗಳಿಗೆ ಅಲ್ಲಿ ಮನೆ ಇರುವುದಿಲ್ಲ, ಅನೇಕ ತೊಂದರೆಗಳು ಇವೆ. ತೊಂದರೆಗಳ ಬಗ್ಗೆ ಕೂಡ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಮೊದಲು ನೇಮಕಾತಿ ಮಾಡಿ ನಂತರ ಮನೆಗಳನ್ನು ಕೊಡಬೇಕಾಗುತ್ತದೆ. ಈಗಾಗಲೇ ಊರಿನಲ್ಲಿ ಕೆಲವು ದಾನಿಗಳನ್ನು ಕೇಳಿದ್ದೇವೆ ಸ್ಕೂಲ್ ಇರತಕ್ಕಂಥ ಭಾಗದಲ್ಲಿ ಮನೆಗಳನ್ನು ಕಟ್ಟಿಕೊಡಿ, ಅವರಿಗೆ ಬಾಡಿಗೆ ಕೊಡುವುದಕ್ಕೆ ಅನುಕೂಲವಾಗುತ್ತದೆ.

ನಾವು ಬಾಡಿಗೆಯನ್ನು ಡಿಡಕ್ಟ್ ಮಾಡಿ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದೇವೆ. ಇದು ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಆಗದಿದ್ದರೂ ಕೂಡ ಕೆಲವು ಭಾಗದ ಜನ ಮುಂದೆ ಬರುವವರಿದ್ದಾರೆ. ಇನ್ನು ಹೈಸ್ಕೂಲ್‌ನಲ್ಲಿ ಎಷ್ಟು ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ ಎಂದು ಕೇಳಿದ್ದಾರೆ. ಪದವಿ ಪೂರ್ವ ಕಾಲೇಜಿನಲ್ಲಿ ಎಷ್ಟು ಲೆಕ್ಚರರ್ಸ್ ಹುದ್ದೆಗಳು ಖಾಲಿ ಇವೆ ಎಂದು ಕೇಳಿದ್ದಾರೆ. ಪದವಿ ಪೂರ್ವ ಕಾಲೇಜಿನ ಲಿಸ್ಟ್ ಕೊಟ್ಟಿದ್ದೇವೆ. ಪದವಿ ಪೂರ್ವ ಕಾಲೇಜಿನಲ್ಲಿ ಸುಮಾರು 8064 ಲೆಕ್ಚರರ್ಸ್‌ರವರನ್ನು ನೇಮಕ ಮಾಡತಕ್ಕಂಥ ವ್ಯವಸ್ಥೆಯನ್ನು ಕೆ.ಪಿ.ಎಸ್.ಸಿ. ಮಾಡುತ್ತಿದ್ದೆ. ಈ ಸದ್ಯದಲ್ಲಿ ಇದು ಆಗುತ್ತದೆ. ಎಲ್ಲರಿಗೂ ಹಳ್ಳಿಗೆ ಕಳುಹಿಸುತ್ತೇವೆ. ಇನ್ನು 2,000 ಪ್ರೌಢಶಾಲಾ ಶಿಕ್ಷಕರನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ಅವರನ್ನೂ ಸಹ ಎಲ್ಲೆಲ್ಲಿ ಹಳ್ಳಿಗೆ ಅವಶ್ಯಕತೆ ಇದೆ ಅಲ್ಲಿ ಇಂಪಾರ್ಟೆನ್ಸ್ ಕೊಟ್ಟು ಉಪಾಧ್ಯಾಯರುಗಳನ್ನು ನೇಮಕ ಮಾಡತಕ್ಕಂಥ ಬಗ್ಗೆ ಸರ್ಕಾರ ದೀರ್ಘವಾಗಿ ಯೋಚನೆ ಮಾಡುತ್ತಿದೆ. ಇದನ್ನು ಕಾರ್ಯರೂಪಕ್ಕೆ ತರುತ್ತೇವೆ. ಈಗಾಗಲೇ ತಮ್ಮೆಲ್ಲರ ಸಹಕಾರ ಈ ಸಾರಿ

ಬಂದಿದೆ. 9350 ಉಪಾಧ್ಯಾಯರುಗಳನ್ನು ನೇಮಕ ಮಾಡುವಾಗ ಯಾರೂ ಮಧ್ಯೆ ಪ್ರವೇಶ ಮಾಡಲಿಲ್ಲ. ಇದೇ ರೀತಿ ಮುಂದೆ ಸಹ ಅದೇ ರೀತಿ ಆದರೆ ಎಲ್ಲಾ ಹಳ್ಳಿಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡಲು ಅನುಕೂಲವಾಗಿರತಕ್ಕಂಥ ವಾತಾವರಣ ಇದೆ, ಅದನ್ನು ಮುಂದುವರೆಸಿಕೊಂಡು ಬರಬಹುದು ಎನ್ನುವ ವಿಷಯವನ್ನು ತಮಗೆ ತಿಳಿಸುತ್ತೇನೆ.

ಶ್ರೀ ಬಿ. ಬಿ. ಶಿವಪ್ಪ : ಒಂಭತ್ತು ಸಾವಿರ ಚಿಲ್ಲರೆ ಉಪಾಧ್ಯಾಯರುಗಳನ್ನು ನೇಮಕ ಮಾಡದಂಥ ಸಂದರ್ಭದಲ್ಲಿ ಶಾಸಕರು ಯಾರೂ ಪ್ರವೇಶ ಮಾಡಲಿಲ್ಲ. ಆದರೆ ಒಂದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ಉಪಾಧ್ಯಾಯರು ಹಳ್ಳಿಗೆ ಹೋಗಿ ಚಾರ್ಜು ತೆಗೆದುಕೊಂಡು ನಂತರ ರಜೆ ಹಾಕಿಕೊಂಡು ಹೊರಟು ಹೋಗಿದ್ದಾರೆ. ಇಲ್ಲಿಯವರೆಗೆ ಶಾಲೆಗೆ ಬಂದಿಲ್ಲ. ಅಂತಹದ್ದು ತಮ್ಮ ಗಮನಕ್ಕೆ ಬಂದರೆ ಯಾರನ್ನು ಯಾವ ಶಾಲೆಗೆ ನೇಮಕ ಮಾಡಿದ್ದೀರಿ ಅವರನ್ನು ಅದೇ ಶಾಲೆಗೆ ತೆಗೆದುಕೊಳ್ಳಬೇಕು. ತೆಗೆದುಕೊಳ್ಳದಿದ್ದರೆ ತಕ್ಷಣ ಅವರನ್ನು ನೇಮಕಾತಿಯನ್ನು ರದ್ದುಪಡಿಸಿ. ತಕ್ಷಣ ಆ ಜಾಗಕ್ಕೆ ಬೇರೆಯವರನ್ನು ನೇಮಕಾತಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ಬಹುಶಃ ಉಪಾಧ್ಯಾಯರುಗಳು ಹಳ್ಳಿಯಲ್ಲಿ ನಿಲ್ಲುವುದಕ್ಕೆ ಸಾಧ್ಯವಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಇದನ್ನು ಖಂಡಿತ ಮಾಡಬೇಕೆಂದು ಆಸೆಯಿಂದ ಮಾಡುತ್ತಿದ್ದೇವೆ. ಅವರು ಹೋಗಲೇ ಬೇಕು ಎಂದು ಕಡ್ಡಾಯವಾಗಿ ಮಾಡಿದ್ದೇವೆ. ಅವರು ಹೋಗದಿದ್ದರೆ ಖಂಡಿತ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಏಳನೇ ತರಗತಿ ಪಬ್ಲಿಕ್ ಪರೀಕ್ಷೆ ಕುರಿತು.

85 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತವೇನು?

ಆ) 1 ರಿಂದ 7ನೇ ತರಗತಿಯವರೆಗೆ ಕನಿಷ್ಟ ಎಷ್ಟು ಶಿಕ್ಷಕರು ಇರಲೇಬೇಕೆಂದು ಸರ್ಕಾರ ನಿಗಧಿಮಾಡಿದೆಯೇ?

ಇ) ಈ ಅನುಪಾತದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು? ಇಷ್ಟೊಂದು ಶಿಕ್ಷಕರ ಕೊರತೆ ಇದ್ದಾಗ್ಯೂ 7ನೇ ತರಗತಿ ಪರೀಕ್ಷೆಯನ್ನು ಪಬ್ಲಿಕ್ ಪರೀಕ್ಷೆಯಾಗಿ ಪರಿವರ್ತಿಸಿದಲ್ಲಿ ಗ್ರಾಮೀಣ ಪ್ರದೇಶದ ಶಿಕ್ಷಕರ ಕೊರತೆಯಿಂದಾಗಿ ಪಾಠ ಪ್ರವಚನಗಳೇ ನಡೆಯದಿರುವ ಶಾಲೆಗಳ ವ್ಯಾಸಾಂಗ ಮಾಡುವ ಮಕ್ಕಳ ಭವಿಷ್ಯಕ್ಕೆ ಮಾರಕವಾಗುವುದಿಲ್ಲವೇ?